1	2	3	4	5
25.	ಹಾವೇರಿ	–	2744.47	2744.47
26.	ಉಡುಪಿ	–	–	0
	ಒಟ್ಟು	**405.78**	**13473.20**	**13878.98**

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ನ್ಯಾಯ ಬೆಲೆ ಅಂಗಡಿಗಳು

3202 (3657) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಸಹಕಾರ ಸಂಘಗಳ ಮೂಲಕ ನಡೆಯುತ್ತಿರುವವರುಗಳ ಸಂಖ್ಯೆ ಎಷ್ಟು? ಖಾಸಗಿಯವರ ಮೂಲಕ ನಡೆಯುತ್ತಿರುವವರ ಸಂಖ್ಯೆ ಎಷ್ಟು?

ಆ) ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶವಿದೆಯೇ: ಹಾಗಿದ್ದಲ್ಲಿ ಎಂತಹ ಸಂದರ್ಭಗಳಲ್ಲಿ ತೆರೆಯಲು ಅವಕಾಶವಿದೆ.

ಇ) ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಾಗ ಅನುಸರಿಸಲಾಗುವ ನೀತಿ ನಿಯಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 84
67
17

ಆ) ಇದೆ.

ಪಡಿತರ ಚೀಟಿಗಳ ಲಭ್ಯತೆಯ ಸಂಖ್ಯೆ ಮತ್ತು ಅಂತರ ಆಧರಿಸಿ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶ ಮಾಡಿಕೊಡಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ 300 ಹಾಗೂ ನಗರ ಪಟ್ಟಣ ಪ್ರದೇಶಗಳಲ್ಲಿ ಕನಿಷ್ಟ 500 ಪಡಿತರ ಚೀಟಿಗಳು ಲಭ್ಯವಿದ್ದಲ್ಲಿ ಸಾರ್ವಜನಿಕ ಬೇಡಿಕೆಯನ್ನಾಧರಿಸಿ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶವಿರುತ್ತದೆ.

ಇ) ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ವ) ನಿಯಂತ್ರಣ ಆದೇಶ 1992ರ ನಿಯಮಾನುಸಾರ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗುವುದು. ಜೊತೆಗೆ ಈ ಆದೇಶ ತಿದ್ದುಪಡಿ ಮಾಡಿ, ಸ್ತ್ರೀ ಶಕ್ತಿ ಗುಂಪುಗಳಿಗೆ, ಆದ್ಯತೆ ಕೊಡುವ ಕ್ರಮ ಜರುಗಿದೆ.

ರಾಜ್ಯದಲ್ಲಿ ಯಶಸ್ವಿನಿ ವಿಮಾ ಯೋಜನೆ

3203 (3658) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಶಸ್ವಿನಿ ವಿಮಾ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ;

ಆ) ಇದರ ಸಾಧಕ – ಬಾದಕಗಳೇನು?

ಇ) ಗ್ರಾಮಾಂತರ ಪ್ರದೇಶಗಳ ಯಾವ ಯಾವ ಸಹಕಾರ ಸಂಘಗಳಲ್ಲಿ ರೈತರು ಸದಸ್ಯರಾಗಬಹುದು; ಮಾಸಿಕ ಕಂತಿನ ಮೊಬಲಗು ಎಷ್ಟು;

ಈ) ಈವರೆಗೆ ಎಷ್ಟು ಸದಸ್ಯರು ಈ ಯೋಜನೆಯಲ್ಲಿ ನೊಂದಾಯಿಸಿಕೊಂಡಿದ್ದಾರೆ: ಎಷ್ಟು ಜನ ಸದಸ್ಯರಿಗೆ ಶಸ್ತ್ರ ಚಿಕಿತ್ಸೆ ಹಾಗೂ ಇತರೆ ಸೌಲಭ್ಯಗಳು ದೊರೆತಿದೆ:

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಸರ್ಕಾರವು ಯಶಸ್ವಿನಿ ಸಹಕಾರ ರೈತರ ಆರೋಗ್ಯ ಯೋಜನೆಯನ್ನು ದಿನಾಂಕ: 1.6.2003 ರಿಂದ ಜಾರಿಗೆ ಬಂದಿದೆ.

ಆ) ದುಬಾರಿಯಾದ ಶಸ್ತ್ರ ಚಿಕಿತ್ಸೆಗಳನ್ನು ರೈತ ಸಹಕಾರಿಗಳು ಪಡೆಯಲು ಅನುಕೂಲ ಮಾಡಿಕೊಡುವುದು, ಇತ್ತೀಚೆಗೆ ಅನುಷ್ಠಾನಗೊಳಿಸಲಾಗಿರುವ ಕಾರ್ಯಕ್ರಮವಾಗಿರುವುದರಿಂದ ಅನುಷ್ಠಾನ ಆದ ನಂತರ ಸಾಧಕ-ಬಾಧಕಗಳನ್ನು ತಿಳಿದುಕೊಳ್ಳಲು ಕಾಲಾವಕಾಶ ಅಗತ್ಯವಿರುತ್ತದೆ.

ಇ) ಈ ಕೆಳಕಂಡ ಯಾವುದಾದರೂ ಒಂದು ಸಹಕಾರ ಸಂಘದಲ್ಲಿ ಕನಿಷ್ಟ ಆರು ತಿಂಗಳ ಅವಧಿಗೆ ಸದಸ್ಯರಾದ ರೈತರು ಮಾಹೆಯಾನ ರೂ. 5.00 ರಂತೆ ವಾರ್ಷಿಕ ರೂ.6-00 ಗಳನ್ನು ಪಾವತಿಸಿ ಈ ಯೋಜನೆಯ ಸದಸ್ಯತ್ವವನ್ನು ಪಡೆಯಬಹುದಾಗಿದೆ.

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು.
2. ಹಾಲು ಉತ್ಪಾದಕರ ಸಹಕಾರ ಸಂಘಗಳು
3. ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸಹಕಾರ ಸಂಘಗಳು
4. ಪ್ರಾಥಮಿಕ ಸಹಕಾರ ಕೃಷಿ: ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳು
5. ರೇಷ್ಮೆ ಹಾಗೂ ರೈತರ ಸೇವಾ ಸಹಕಾರ ಸಂಘಗಳು
6. ಮೀನುಗಾರಿಕೆ ಸಹಕಾರ ಸಂಘಗಳು
7. ಜೇನು ಸಾಕಾಣಿಕೆ ಸಹಕಾರ ಸಂಘಗಳು,
8. ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘಗಳು
9. ಸಹಕಾರ ಸಕ್ಕರೆ ಕಾರ್ಖಾನೆಗಳು
10. ತೋಟದ ಬೆಳೆಗಾರರ ಸಹಕಾರ ಸಂಘಗಳು ಹಾಗೂ ಕೃಷಿ ತೋಟಗಾರಿಕೆ ಪಶುಪಾಲನೆ ಹಾಗೂ ಇವುಗಳಿಗೆ ಸಂಬಂಧಿಸಿದ ಚಟುವಟಿಕೆಗಳುಳ್ಳ ಇತರೆ ಸಹಕಾರ ಸಂಘಗಳು

ಈ) ಈ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ 16,01,152 ರೈತ ಸದಸ್ಯರನ್ನು ನೊಂದಾಯಿಸಲಾಗಿದೆ. ದಿನಾಂಕ: 1.6.2003 ರಿಂದ ದಿನಾಂಕ: 14.7.2003ರವರೆಗೂ 511 ರೈತ ಸದಸ್ಯರು ಶಸ್ತ್ರ ಚಿಕಿತ್ಸೆಯ ಸೌಲಭ್ಯವನ್ನು ಹಾಗೂ 2841 ರೈತ ಸದಸ್ಯರು ಹೊರ ರೋಗಿಗಳಾಗಿ ಸೌಲಭ್ಯವನ್ನು ಪಡೆದು ಒಟ್ಟು 3352 ರೈತರು ಈ ಯೋಜನೆಯಲ್ಲಿ ಸೌಲಭ್ಯವನ್ನು ಪಡೆದಿರುತ್ತಾರೆ.

ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ನಷ್ಟದಲ್ಲಿರುವ ಹಾಗೂ ಮುಚ್ಚಿರುವ ಸಹಕಾರ ಸಂಘಗಳು

3204 (3660) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎಷ್ಟು ಸಹಕಾರ ಸಂಘಗಳು ಅಸ್ತಿತ್ವದಲ್ಲಿವೆ: ತಾಲ್ಲೂಕುವಾರು ಮಾಹಿತಿ ನೀಡುವುದು:

ಆ) ಇವುಗಳಲ್ಲಿ ಎಷ್ಟು ನಷ್ಟದಲ್ಲಿವೆ ಮತ್ತು ಇವುಗಳಲ್ಲಿ ಮುಚ್ಚಿರುವ ಸಹಕಾರ ಸಂಘಗಳು ಯಾವುವು: